205


# ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್,
ಮಿಷನ್ ರಸ್ತೆ, ಬೆಂಗಳೂರು–560027


ಸಂಖ್ಯೆ: ಕಾ/ರೇರಾ/ರೆವಿನ್ಯೂ/ಸಿಆರ್/20/2019–20 ದಿನಾಂಕ: 19.09.2020

(ಲಗತ್ತು: ಎಕ್ಸೆಲ್ ಶೀ. 01 ಒಂದು 107 ರೀತಿಯ)

**ರವರಿಗೆ:**

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ, 5ನೇ ಮಹಡಿ, 3ನೇ ಹಂತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

19/9

ಮಾನ್ಯರೆ,

ವಿಷಯ : ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 2016ರ ಕಲಂ 40(1) ನಿಯಮ 25 ರಂತೆ ದಂಡ/ಪರಿಹಾರದ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡುವ ಬಗ್ಗೆ.

ಉಲ್ಲೇಖ 1. ಮಾನ್ಯ ಅಧ್ಯಕ್ಷರು, ರೇರಾ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ದಿನಾಂಕ: 16.01.2020

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರಿಗೆ ರೇರಾ ಪ್ರಾಧಿಕಾರದಿಂದ ಬರೆದಿರುವ ಪತ್ರ ದಿನಾಂಕ 10.1.2020
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಬರೆದಿರುವ ಸಮ ಸಂಖ್ಯೆಯ ಪತ್ರ ದಿ:9.12.2019
4. ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರಿಗೆ ಬರೆದಿರುವ ಸಮ ಸಂಖ್ಯೆ ಪತ್ರ ದಿ: 18.11.2019 22.11.2019 09.03.2020 & 26.05.2020
5. ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರಿಗೆ ಬರೆದಿರುವ ಅ.ಸ.ಪ ಸಂ: ರೇರಾ/4/ಆರ್‌ಇವಿ/2018–19 ದಿ:10.7.2019, 02.02.2019, 14.05.2019ಮತ್ತು 29.05.2019
6. ಪ್ರಾಧಿಕಾರದಿಂದ ಜಿಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ಇವರಿಗೆ ಬರೆದ ಅ.ಸ.ಪತ್ರ ಸಂಖ್ಯೆ: ರೇರಾ/ಕಂದಾಯ/ ಸಿಆರ್/20/2019–20/ ದಿನಾಂಕ: 18.11.2019 ಮತ್ತು 09.09.2020.

*******

ಭಾರತ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016ನ್ನು ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯವು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ನಿಯಮಗಳು 2017ನ್ನು ದಿನಾಂಕ 11.7.2017ರಂದು ಜಾರಿಗೆ ತಂದಿದ್ದು, ಅದರಂತೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಸ್ಥಾಪನೆಯಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016ರ ಕಲಂ 4(1)ರ ಪ್ರಕಾರ ಪ್ರತಿಯೊಬ್ಬ ಅಭಿವೃದ್ಧಿದಾರರು ತಮ್ಮ ರಿಯಲ್ ಎಸ್ಟೇಟ್ ಯೋಜನೆಯನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕಾಗಿರುತ್ತದೆ. ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016ರ ಕಲಂ 3(1) ರ ಪ್ರಕಾರ ಅಭಿವೃದ್ಧಿದಾರರು ರೇರಾ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘನೆ ಮಾಡಿದ ಪ್ರಕರಣಗಳಲ್ಲಿ, ಖರೀದಿದಾರರು ರೇರಾ ಪ್ರಾಧಿಕಾರದಲ್ಲಿ ದಾಖಲಾದಂತಹ ದೂರುಗಳನ್ನು (ನೋಂದಾಯಿತ ಯೋಜನೆಯ ದೂರುಗಳನ್ನು) ರೇರಾ ಪ್ರಾಧಿಕಾರದ ನ್ಯಾಯ ನಿರ್ಣಯಾಧಿಕಾರಿಗಳು ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016ರ ಕಲಂ 31ರ ಪ್ರಕಾರ ವಿಚಾರಣೆ ಮಾಡಿ, ಆದೇಶದಂತೆ ಅಭಿವೃದ್ಧಿದಾರರು/ಪರಿಹಾರ ಪಾವತಿಸಲು ವಿಫಲರಾದಂತಹ ಪ್ರಕರಣಗಳನ್ನು ಕಾಯ್ದೆ 2016ರ ಕಲಂ 40(1) ಹಾಗೂ ನಿಯಮ 25ರ ಪ್ರಕಾರ ದಂಡ/ಪರಿಹಾರ ಮೊತ್ತವನ್ನು ಭೂ ಕಂದಾಯ ಬಾಕಿ ವಸೂಲಿ ಮಾಡಲು ಆದೇಶಿಸಿ

**ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ**

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560027

ತೀರ್ಪುಗಳನ್ನು ಹೊರಡಿಸಲಾಗಿರುತ್ತದೆ. ಅಂತಹ ಪ್ರಕರಣಗಳನ್ನು ಭೂ ಕಂದಾಯ ಬಾಕಿ ವಸೂಲಿ ರೂಪದಲ್ಲಿ ವಸೂಲಿ ಮಾಡಲು ಕೋರಿ ಅಧಿಕಾರದತ್ತವಾದ ಜಿಲ್ಲಾಧಿಕಾರಿಗಳನ್ನು ಕೋರಲಾಗಿರುತ್ತದೆ.

ಈ ರೀತಿ ಪ್ರಾಧಿಕಾರದಲ್ಲಿ ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016 ರ ಕಲಂ 40(1) ಹಾಗೂ ನಿಯಮ 25ರ ಪ್ರಕಾರ ವಸೂಲಿಗಾಗಿ ಪತ್ರ ಬರೆದಿರುವಂತೆ 2020ನೇ ಸಾಲಿನ ಸೆಪ್ಟೆಂಬರ್ 15ರ ಅಂತ್ಯಕ್ಕೆ **ಒಟ್ಟು 447 ಪ್ರಕರಣಗಳ** (ಅನುಬಂಧ ಲಗತ್ತಿಸಿದೆ) ಬಾಬ್ತು ಎದುರುದಾರರಿಂದ (ಅಭಿವೃದ್ಧಿದಾರರು) ಫಿರ್ಯಾದುದಾರರಾದ / ಮನೆ ಖರೀದಿದಾರರಿಗೆ ಪಾವತಿಸಬೇಕಾಗಿರುವ **ಒಟ್ಟು ಬಾಕಿ ಮೊತ್ತ ರೂ. 185,13,25,616/- (ಒಂದು ನೂರ ಎಂಬತ್ತೈದು ಕೋಟಿ ಹದಿಮೂರು ಲಕ್ಷದ ಇಪ್ಪತ್ತೈದು ಸಾವಿರದ ಆರು ನೂರ ಹದಿನಾರು ಮಾತ್ರ)** ಗಳನ್ನು ಕನಾಟಕ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ಕನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳನ್ವಯ ವಸೂಲಿ ಮಾಡಿ ಖಜಾನೆ-2ರಲ್ಲಿ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಲೆಕ್ಕ ಶೀರ್ಷಿಕೆ 8342-00-120-0-18-671 ಖಾತೆ ಸಂ: 26572 158 ರ ಡಿಡಿಓ ಕೋಡ್ 998070 ಕ್ಕೆ ಜಮಾ ಮಾಡಲು, 438 ಪ್ರಕರಣಗಳಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳನ್ನು ಹಾಗೂ ತಲಾ ಒಂದು ಪ್ರಕರಣದಲ್ಲಿ ಮೈಸೂರು ಜಿಲ್ಲೆ ಮತ್ತು ಧಾರವಾಡ ಜಿಲ್ಲೆ ಹಾಗೂ ಎರಡು ಪ್ರಕರಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ವಸೂಲು ಮಾಡಲು ಕೋರಲಾಗಿದೆ.

ಅತಿ ಹೆಚ್ಚು ಭೂ ಕಂದಾಯ ಬಾಕಿ ವಸೂಲಿ ಪ್ರಕರಣಗಳು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯ ವ್ಯಾಪ್ತಿಗೆ ಸಂಬಂಧಿಸಿದ್ದಾಗಿದ್ದು, ಈ ವಿಷಯದ ಗಂಭೀರತೆಯನ್ನು ತಿಳಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಉಲ್ಲೇಖದಂತೆ ಹಲವು ಬಾರಿ ಪತ್ರ & ಅರೆ ಸರ್ಕಾರಿ ಪತ್ರಗಳನ್ನು ಬರೆದು ಭೂ ಕಂದಾಯ ಬಾಕಿ ಮೊತ್ತ ವಸೂಲಿ ಮಾಡುವಂತೆ ಕೋರಲಾಗಿರುತ್ತದೆ. ಆದಾಗ್ಯೂ ಬೆಂಗಳೂರು ನಗರ ಜಿಲ್ಲೆಯಲ್ಲಿ 447 ಪ್ರಕರಣಗಳ ಪೈಕಿ ಕೇವಲ 5 ಪ್ರಕರಣಗಳಲ್ಲಿ ಮಾತ್ರ 1.66 ಕೋಟಿ ರೂ. ಮಾತ್ರ ಭೂ ಕಂದಾಯ ವಸೂಲಾಗಿರುತ್ತದೆ. ಉಳಿದಂತೆ ಬಹುತೇಕ 442 **ಪ್ರಕರಣಗಳಲ್ಲಿ ರೂ.183,46,36,658/- (ಒಂದು ನೂರ ಎಂಬತ್ತಮೂರು ಕೋಟಿ ನಲವತ್ತಾರು ಲಕ್ಷ ಮುವತ್ತಾರು ಸಾವಿರದ ಆರು ನೂರ ಐವತ್ತೆಂಟು ಮಾತ್ರ)** ಭೂ ಕಂದಾಯ ವಸೂಲಿ ಕುಂಠಿತಗೊಂಡಿರುತ್ತದೆ ಹಾಗೂ ಉಳಿಕೆ ಪ್ರಕರಣದಲ್ಲಿನ ಭೂ ಕಂದಾಯ ಬಾಕಿ ವಸೂಲು ಮಾಡಿರುವ ಕುರಿತು ಕ್ರಮ ತೆಗೆದುಕೊಂಡಿರುವ ಮಾಹಿತಿಗಳನ್ನು ರೇರಾ ಪ್ರಾಧಿಕಾರದ ಗಮನಕ್ಕೆ ಬಂದಿರುವುದಿಲ್ಲ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರಿಗೆ ರೇರಾ ಪ್ರಾಧಿಕಾರದಿಂದ ಉಲ್ಲೇಖ-2ರಂತೆ ದಿನಾಂಕ 10.1.2020ರಂದು ಬರೆದಿರುವ ಪತ್ರದಲ್ಲಿ ಮತ್ತು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ರೇರಾ ಪ್ರಾಧಿಕಾರದಿಂದ ಉಲ್ಲೇಖ-3ರ ದಿನಾಂಕ 9.12.2019 ರಂದು ಪತ್ರ ಬರೆದು ಮನೆ ಖರೀದಿದಾರರಿಗೆ ಅಭಿವೃದ್ಧಿದಾರರಿಂದ ಬರಬೇಕಾದ ದಂಡ/ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳ ಪ್ರಕಾರ ಇತರೆ ಸರ್ಕಾರಿ ಬಾಕಿಗಳನ್ನು ವಸೂಲಿ ಮಾಡುವ ಎಲ್ಲಾ ನಿಯಮಗಳನ್ನು ಅನುಸರಿಸಿ ಸಕ್ಷಮ ಪ್ರಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಂದ ಕಾಲ ಮಿತಿಯೊಳಗೆ ಭೂ ಕಂದಾಯ ಬಾಕಿ ವಸೂಲಿ ಮಾಡಿ ಪ್ರಾಧಿಕಾರದ ದಂಡದ ಮೊತ್ತವನ್ನು ಪಾವತಿಸಲು ಸಕ್ಷಮ ಪ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ತಮ್ಮಲ್ಲಿ ಕೋರಲಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳಂತೆ ಭೂ ಕಂದಾಯ ವಸೂಲಿ ಮಂದಗತಿಯಾದ್ದರಿಂದ ಬಹುತೇಕ ನೊಂದ ಗ್ರಾಹಕರು/ಖರೀದಿದಾರರು ಪ್ರಾಧಿಕಾರಕ್ಕೆ ಹಲವಾರು ಮನವಿ/ದೂರುಗಳನ್ನು ಸಲ್ಲಿಸುತ್ತಿದ್ದು, ರೇರಾ ಕಾಯ್ದೆಯ ಪ್ರತಿಫಲವನ್ನು ಗ್ರಾಹಕರು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಮತ್ತು ರೇರಾ ಕಾಯ್ದೆಯ ಮತ್ತು ನಿಯಮಗಳ ಉದ್ದೇಶವು ಸಫಲತೆ ಕಂಡುಬರುತ್ತಿಲ್ಲ. ಅದರಂತೆ, ಮನೆ ಖರೀದಿದಾರರಿಗೆ ಸಕಾಲದಲ್ಲಿ ಈ ಪ್ರಾಧಿಕಾರ ಮತ್ತು ನ್ಯಾಯ ನಿರ್ಣಯಾಧಿಕಾರಿಗಳು ಹೊರಡಿಸಿದ ಆದೇಶ ಮತ್ತು ದಂಡದ ಹಣವನ್ನು ವಸೂಲಿ ಮಾಡುವ ವಿಚಾರದಲ್ಲಿ ರೇರಾ ಪ್ರಾಧಿಕಾರ ವಿಫಲವಾದಂತಾಗುತ್ತದೆ.

# ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027


ಆದ್ದರಿಂದ, ದಯಮಾಡಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಮೈಸೂರು ಜಿಲ್ಲೆ, ಧಾರವಾಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವರುಗಳಿಗೆ ಭೂ ಕಂದಾಯ ಬಾಕಿಯನ್ನು ಕಾಲ ಮಿತಿಯೊಳಗೆ ವಸೂಲು ಮಾಡಲು ಕಟ್ಟು ನಿಟ್ಟಿನ ನಿರ್ದೇಶನ ನೀಡಲು ಮತ್ತು ಆಧ್ಯತೆ ಮೇರೆಗೆ ಪ್ರಾಧಿಕಾರದ ಬಾಕಿ ಭೂ ಕಂದಾಯವನ್ನು ವಸೂಲಿ ಮಾಡಲು ಸಕ್ಷಮ ಪ್ರಾಧಿಕಾರಿಗಳಿಗೆ ಸೂಚನೆಗಳನ್ನು ನೀಡುವಂತೆ ತಮ್ಮನ್ನು ಕೋರಲು ಮಾನ್ಯ ಅಧ್ಯಕ್ಷರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

**ಲಗತ್ತು:–**

1. ಭೂ ಕಂದಾಯ ಬಾಕಿ ವಸೂಲಾಗಬೇಕಾದ ಪ್ರಕರಣಗಳ ತಖ್ತೆ, **ಅನುಬಂಧ–1**
2. ಅಭಿವೃದ್ಧಿದಾರರಿಂದ ವಸೂಲಾಗಬೇಕಾದ ಬಾಕಿ ಪಟ್ಟಿ, **ಅನುಬಂಧ–2**
3. ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪ್ರಕರಣಗಳ ಬಾಕಿ ಪಟ್ಟಿ, **ಅನುಬಂಧ–3**

ತಮ್ಮ ವಿಶ್ವಾಸಿ,

ಕಾರ್ಯದರ್ಶಿ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

18/9/2020

**ಪ್ರತಿಯನ್ನು:–**

1. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ರವರಿಗೆ, ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು ಕೋರಿದೆ.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಶಾಂತಿನಗರ, ಬೆಂಗಳೂರು ರವರಿಗೆ ಮಾಹಿತಿಗಾಗಿ.
3. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ/ಮೈಸೂರು ಜಿಲ್ಲೆ/ಧಾರವಾಡ ಜಿಲ್ಲೆ & ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಸೂಕ್ತ ಅಗತ್ಯ ಕ್ರಮಕ್ಕಾಗಿ
4. ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪ ವಿಭಾಗ /ಮೈಸೂರು ಉಪ ವಿಭಾಗ /ಧಾರವಾಡ ಉಪ ವಿಭಾಗ & ದಕ್ಷಿಣ ಕನ್ನಡ ಉಪ ವಿಭಾಗ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
5. ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ /ದಕ್ಷಿಣ/ ಪೂರ್ವ/ ಯಲಹಂಕ/ ಆನೇಕಲ್ ತಾಲ್ಲೂಕು ರವರಿಗೆ ತುರ್ತು ವಸೂಲಾತಿಗಾಗಿ ಮುಂದಿನ ಕ್ರಮಕ್ಕಾಗಿ.
6. ತಹಶೀಲ್ದಾರ್, ಮೈಸೂರು, ಧಾರವಾಡ ಮತ್ತು ದಕ್ಷಿಣ ಕನ್ನಡ ತಾಲ್ಲೂಕು ರವರಿಗೆ ತುರ್ತು ವಸೂಲಾತಿಗಾಗಿ ಮುಂದಿನ ಕ್ರಮಕ್ಕಾಗಿ.
7. ಕಛೇರಿ ರಕ್ಷಾ ಕಡತ.

ದೂರವಾಣಿ ಸಂಖ್ಯೆ:080–22249798/ 22249799, ಇ–ಮೇಲ್: info.rera@karnataka.gov.in ವೆಬ್‌ಸೈಟ್: rera.karnataka.gov.in